MR. DEPUTY SPEAKER .— The question is :

" That the Disturbed Areas (Special Courts) (Karnataka Amendment) Bill, 1981 be taken into consideration. "

The Motion was adopted.

CLAUSE No. 2

MR. DEPUTY SPEAKER .— The question is :

" That Clause 2 do stand part of the Bill."

The Motion was adopted.

Clause 2 was added to the Bill.

CLAUSE 1, ETC

MR. DEPUTY SPEAKER .— The question is :

" That Clause 1, the Long Title, the Preamble and the Enacting Formula do stand part of the Bill. "

The motion was adopted.

(Clause 1, the Long Title, the Preamble and the Enacting Formula were added to the Bill.)

MOTION TO PASS

SRI Y. RAMAKRISHNA .— Sir, I beg to move :

That the Disturbed Areas(Special Courts)(Karnataka Amendment, Bill, 1981, be passed."

MR, DEPUTY SPEAKER .— The question is :

" That the Disturbed Areas (Special Courts)(Karnataka Amendment) Bill, 1981, be passed. "

The Motion was adopted and the Bill was passed.

THE PREVENTION OF INCITEMENT TO REFUSE OR TO DEFER PAYMENT OF TAX BILL, 1981.

Motion to consider

SRI Y. RAMAKRISHNA (Minister for Law and Parliament Affairs).- Sir, on behalf of the Chief Minister, I move :

"That the Prevention of incitementary to Refuse or to Defer payment of Tax Bill, 1981, be taken into consideration."

The question was proposed

ಶ್ರೀ ಪೈ, ರಾಮಕೃಷ್ಣ.—ಸ್ವಾಮಿ, ಇದೊಂದು ಹೊಸ ಮಸೂದೆ. ಇದರ ಉದ್ದೇಶ ಏನೆಂದರೆ, ಸರ್ಕಾರಕ್ಕೆ ಕೊಡಬೇಕಾದಂಥ ಹಣವನ್ನು ಅಂದರೆ ಕಂದಾಯದ ರೂಪದಲ್ಲಿಯಾಗಲೀ ಅಥವಾ ತೆರಿಗೆ ರೂಪದಲ್ಲಿಯಾಗಲೀ ಅಥವಾ ಬೇರೆ ಯಾವುದೇರೂಪದಲ್ಲಿಯಾಗಲೀ ಕೊಡತಕ್ಕಂಥ ಸಂದರ್ಭದಲ್ಲಿ, ಅದನ್ನು ಯಾರಾದರೂ ಕೊಡಬೇಡಿ ಎಂದು ಅಡ್ಡಿ ಪಡಿಸಿದರೆ, ಬರಪಡಿಗೆಯ ಮೂಲಕ ಇಲ್ಲವೇ ಭಾಷಣಗಳ ಮೂಲಕ ಅಡ್ಡಿ ಪಡಿಸಿದರೆ, ಅದು ಶಿಕ್ಷಾರ್ಹವಾದಂಥ ಅಪರಾಧವಾಗುತ್ತದೆಂದು ಸಾರಲು ಈ ಬಿಲ್‌ನ್ನು ತರಲಾಗಿದೆ. ಸರ್ಕಾರಕ್ಕೆ ಬರುವ ಹಣ ಅಷ್ಟೇ ಅಲ್ಲ. ನಮ್ಮ ಸ್ಥಳೀಯ ಸಂಸ್ಥೆಗಳಿಗೆ ಬರತಕ್ಕಂಥ ಬಾಕಿ ಇರಬಹುದು, ಕೋ-ಆಪರೇಟಿವ್ ಸೊಸೈಟಿಗಳಿಗೆ ಬರತಕ್ಕಂಥ ಬಾಕಿ ಇರಬಹುದು, ಅಂತಹ ಬಾಕಿಯನ್ನು ವಸೂಲಿ ಮಾಡುವಾಗ, ಅದನ್ನು ಕೊಡಬಾರದೆಂದು ಯಾರು ಅಡ್ಡಿಪಡಿಸುತ್ತಾರೋ ಹಾಗೂ ದುರಿದುಂಬಿಸುತ್ತಾರೋ, ಅಂತಹವರಿಗೆ ಕನಿಷ್ಟ ಪಕ್ಷ ೨ ವರ್ಷಗಳ ಕಠಿಣ ಸಜೆ ಮತ್ತು ೩ ಸಾವಿರ ರೂಪಾಯಿಗಳ ದಂಡ ವಿಧಿಸಬೇಕೆಂದು ಈ ಮಸೂದೆಯನ್ನು ತರಲಾಗಿದೆ. ಇದನ್ನು ಮುಖ್ಯವಾಗಿ ತಂದಿರುವ ಉದ್ದೇಶವಾದರೂ ಇಷ್ಟೆ, ಈ ದೇಶದಲ್ಲಿ ನಾವು ಆರ್ಥಿಕ ಭದ್ರತೆಯನ್ನು ನೆಲೆಸಬೇಕಾಗಿದೆ. ಈ ಒಂದು ಕೆಲಸ ಮಾಡಲು ನಾವು ರಿಸರ್ವ್ ಬ್ಯಾಂಕ್‌ನಿಂದ ಸಾಲ ಪಡೆದಿದ್ದೇವೆ. ಟಿಂರ್ಸ್ ಲೋನ್ ಪಡೆದಿದ್ದೇವೆ, ಕಾರ್ಪೊರೇಷನ್‌ಗಳು ಹಾಗೂ ಎಲ್.ಐ.ಸಿ.ಯಿಂದ ಹಣವನ್ನು ಸಾಲವಾಗಿ ಪಡೆದಿದ್ದೇವೆ. ಈ ರೀತಿ ಪಡೆದ ಹಣವನ್ನು ನಮ್ಮ ಯೋಜನೆಗಳಿಗೆ ಸರ್ಕಾರದಲ್ಲಿ ಬಳಸಲು ಮತ್ತು ಬಡವರಿಗೆ ಸಾಲದ ರೂಪದಲ್ಲಿ ಹಂಚಲು ವ್ಯವಸ್ಥೆ ಮಾಡಿದ್ದೇವೆ. ಈ ರೀತಿ ಸರ್ಕಾರದಿಂದ ಸಾಲ ಪಡೆದವರು ಸರ್ಕಾರದಲ್ಲಿ ವಾಪಸ್ ಮಾಡದಿದ್ದರೆ ನಾವು ಯಾರಿಂದ ಸಾಲ ತಂದಿರುತ್ತೇವೋ' ಅವರಿಗೆ ಕೊಡುವುದಕ್ಕಾಗುವುದಿಲ್ಲ. ಆಗ ನಾವು ಡಿಫಾಲ್ಟರ್ಸ್ ಆಗುತ್ತೇವೆ. ಇಂತಹ ಸಂದರ್ಭಗಳಲ್ಲಿ ನಮಗೆ ಹೊಸ ಸಾಲ ಸಿಗುವುದಿಲ್ಲ. ಆಗ ನಾವು ೨೦ ಅಂಶಗಳ ಕಾರ್ಯಕ್ರಮಗಳನ್ನೇ ಆಗಲೀ ಅಥವಾ ಬೇರೆ ಯಾವ ಕಾರ್ಯಕ್ರಮಗಳನ್ನೇ ಆಗಲೀ ಸರ್ಕಾರದಲ್ಲಿ ಕೈಗೊಳ್ಳುವುದು ಕಷ್ಟವಾಗುತ್ತದೆ. ಆದಕ್ಕೋಸ್ಕರವಾಗಿ ನಮ್ಮ ಕಾರ್ಯಕ್ರಮಗಳನ್ನು ಸರಾಗವಾಗಿ ನಡೆಸಿಕೊಂಡು ಹೋಗುವುದಕ್ಕೆ ಯಾರೂ ಅಡ್ಡಿ ಮಾಡಬಾರದೆಂಬ ಸದುದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆ. ಇದನ್ನು ಮಾನ್ಯ ಸದಸ್ಯರು ಸ್ವಾಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಶ್ರೀನಿವಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಕಾನೂನಿನ ಬಗ್ಗೆ ಆರ್ಡಿನೆನ್ಸ್ ಹೊರಡಿಸಿದಾಗ ನಮ್ಮ ಸರ್ಕಾರದ ಮೇಲೆ ಬಹಳಷ್ಟು ಟೀಕೆಗಳು ಬಂದವು. It is a draconian act ಎಂದು ಕೆಲವರು ಕರೆದರು. ಬ್ರಿಟೀಷರ ಕಾಲದಲ್ಲಿ ಆಗಿನ ಸರ್ಕಾರದವರು ಮಾಡಿದಂಥ ದಂಡ ರೂಪದ ಕಾನೂನು ಎಂದು ಮತ್ತೆ ಕೆಲವರು ಕರೆದರು. ಹೀಗೆ ಆ ಸಮಯದಲ್ಲಿ ಅನೇಕ ತರಹದ ಟೀಕೆ ಟಿಪ್ಪಣಿಗಳು ಬಂದವು ಬಹಳ ದಿವಸಗಳಿಂದ ಪಂಚಿತರಾದಂಥ ಜನರನ್ನು ಮೇಲೆತ್ತುವ ಕೆಲಸವನ್ನು ನಮ್ಮ ಸರ್ಕಾರ ಕೈಕೊಂಡಿರುವಾಗ ಇಂತಹ ಒಂದು ಕಾನೂನಿನ ಅವಶ್ಯಕತೆ ಬಹಳಮಟ್ಟಿಗೆ ಇದೆ. ಹಳ್ಳಿಗಳಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ಇರತಕ್ಕಂಥ ಸಮಾಜದ ಬಲಿಷ್ಠ ಮುಖಂಡರುಗಳು ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡರೆ ಅದನ್ನು ಅವರುಗಳು ಸರ್ಕಾರದಲ್ಲಿ ವಾಪಸ್ ಕೊಡುವುದಿಲ್ಲ. ಇಂತಹವರಿಂದ ಸಾಲ ಕೇಳುವ ಹಾಗಿಲ್ಲ. ಇದರಿಂದ ಏನಾಗುತ್ತಿತ್ತು ಎಂದರೆ' ಇನ್ನಿತರ ಸಣ್ಣಪುಟ್ಟ ಜನರಿಗೆ ಬಿ.ಐ.ಆರ್ ಸಾಲವನ್ನಾಗಲೀ ಅಥವಾ ಏನನ್ನು, ಗಾಡಿ ಕೊಳ್ಳಲು ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈಗಿನ ಕಾನೂನಿನ ಪ್ರಕಾರ ೬೦ ಪರ್ಸೆಂಟ್ ಸಾಲ ವಸೂಲಿಯಾಗದಿದ್ದರೆ ಮತ್ತೆ ಸಾಲ ಕೊಡುವುದಿಲ್ಲ. ಇದರಿಂದ ಸಾಲ ವಾಪಸ್ ಮಾಡಿದವರಿಗೆ ತೊಂದರೆಯಾಗುತ್ತಿತ್ತು. ಆರ್ಜಸ್ಸು ಇರತಕ್ಕಂಥ ಮುಖಂಡರುಗಳು ಸಾಲ ತೆಗೆದುಕೊಂಡರೆ ವಾಪಸ್ ಕೊಡುವುದಿಲ್ಲ. ಇಂತಹವರಿಂದ ಅಧಿಕಾರಿಗಳು ಸಾಲ ಕೇಳುವುದಿಲ್ಲ. ಇವರುಗಳಿಗೆ ಹೆದರಿಕೊಂಡು ಅಧಿಕಾರಿಗಳು ಊರಿನಲ್ಲಿ ಕಾಲ ಹಾಕುತ್ತಿದ್ದ ಕಾರಣ ಸಣ್ಣಪುಟ್ಟ ಜನರಿಗೆ ಸಾಲವನ್ನು ಮತ್ತೆ ಸೊಸೈಟಿಗಳ ಮೂಲಕವಾಗಲೀ ಬ್ಯಾಂಕಿಂಗ್‌ಗಳ ಮೂಲಕವಾಗಲೀ ಕೊಡಲು ಸಾಧ್ಯವಾಗುತ್ತಿಲ್ಲ. ಪಟೆಂಥ ಸಾಲ ಮರುಪಾವತಿಯಾಗದ ಕಾರಣ ನಮ್ಮ ಸಮಾಜದಲ್ಲಿ ಒಂದು ರೀತಿಯ ಅವ್ಯವಸ್ಥೆ ಹಾಗೂ ಕ್ಷೋಭೆ ಉಂಟಾಗಿತ್ತು. ಈ ಮೊದಲು ಹಳ್ಳಿಗಳಲ್ಲಿನ ಜನರಿಗೆ ಬಾಸಿಗ ಬಂಡವಾಳಷಾಹಿಗಳು ಹೆಚ್ಚಿನ ಬಡ್ಡಿ ದರದಲ್ಲಿ ಮದುವೆ ಮುಂಜಿ ಕಾರ್ಯಗಳಿಗೆ ಸಾಲ ಕೊಡುತ್ತಿದ್ದರು. ಆನರೆ ಸರ್ಕಾರದವರು ಅಂತಹವರಿಂದ ಕಾಯಿದೆ ಜಾರಿಗೆ ತಂದಮೇಲೆ ಇವರುಗಳಿಂದ ಹತ್ತು ರೂಪಾಯಿಗಳ ಸಾಲವೂ ಸಹ ಸಿಗುತ್ತಿಲ್ಲ ಇಂತಹ ಪರಿಸ್ಥಿತಿಯಲ್ಲಿ ಸಣ್ಣಪುಟ್ಟ ಜನರಿಗೆ ಸರ್ಕಾರದವರು ಸಹಕಾರ ಸಂಸ್ಥೆಗಳ ಮೂಲಕವಾಗಲೀ ಅಥವಾ ರಾಷ್ಟ್ರೀಕೃತ ಬ್ಯಾಂಕಿಂಗ್‌ಗಳ ಮೂಲಕ

ವಾಗಲೀ ಹಣವನ್ನು ಸಾಲದ ರೂಪದಲ್ಲಿ ಕೊಡದಿದ್ದರೆ ಅವರುಗಳ ಬದುಕೇ ದುರಂತವಾಗುತ್ತದೆ. ಈಗ ಕೆಲವು ಸಮಾಜ ವಂಚಕರು ಸರ್ಕಾರದಿಂದ ಲಕ್ಷಗಟ್ಟಲೆ ಹಣವನ್ನು ಸಾಲದ ರೂಪದಲ್ಲಿ ತೆಗೆದುಕೊಂಡಿದ್ದಾರೆ. ಆದರೆ ವಾಪಸ್ ಮಾಡಿಲ್ಲ. ಇಂತಹವರಿಂದ ಸಾಲ ವಸೂಲಿ ಮಾಡಲು ಇಂತಹ ಒಂದು ಕಾನೂನಿನ ಅವಶ್ಯಕತೆ ಇದೆ ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ಸಹಕಾರಿ ಬೇಸಾಯ ಮಾಡುವ ನೆಪದಲ್ಲಿ ೮–೧೦ ಜನರು ಸೇರಿಕೊಂಡು ಒಂದು ಸಂಘ ಮಾಡಿಕೊಂಡು, ಅದನ್ನು ರಿಜಿಸ್ಟರ್ಡ್ ಮಾಡಿಸಿ ಅದರ ಮೂಲಕ ಸರ್ಕಾರದಿಂದ ಲಕ್ಷಗಟ್ಟಲೆ ಹಣವನ್ನು ತೆಗೆದುಕೊಂಡಿದ್ದಾರೆ. ಭೂ–ಸುಧಾರಣಾ ಕಾನೂನಿನಿಂದ ನಂಣಿಚಿಕೊಳ್ಳಲು ಸಹ ಈ ರೀತಿ ಮಾಡಿದ್ದಾರೆ. ಇಂತಹವರ ಒಂದು ಯಾದಿಯನ್ನು ಸರ್ಕಾರದವರು ತಯಾರು ಮಾಡಬೇಕು. ಇವರುಗಳು ಸರ್ಕಾರದಿಂದ ಎಲ್ಲ ರೀತಿಯ ಸವಲತ್ತುಗಳನ್ನು ಪಡೆದುಕೊಂಡಿದ್ದಾರೆ. ಆದರೆ ಇವರುಗಳು ಪಡೆದ ಸಾಲ ಮರುಪಾವತಿಯಾಗಿಲ್ಲ. ಇಂತಹವರ ಹತ್ತಿರ ಸಾಲ ಮರುಪಾವತಿ ಬಗ್ಗೆ ಕೇಳಲು ಅಧಿಕಾರಿಗಳಿಗೆ ಶಕ್ತಿ ಸಾಲದು. ಇಂತಹ ಒಂದು ದುರ್ಭರ ಪರಿಸ್ಥಿತಿ ಇದ್ದ ಕಾರಣದಿಂದ ಈ ಒಂದು ಶಾಸನ ತರುವುದು ಅವಶ್ಯಕವಾಗಿತ್ತು ಎಂದು ಈ ಸಂದರ್ಭದಲ್ಲಿ ಹೇಳಿವುದಕ್ಕೆ ಬಯಸುತ್ತೇನೆ.

೫–೦೦ ಪಿ.ಎಂ.

ಯಾವ ಒಂದು ದುರ್ಬಲ ವರ್ಗದವರು, ಸಮಾಜದಲ್ಲಿ ವಂಚಿತರಾದ ವರ್ಗದವರು ಇದ್ದಾರೆ ಅವರಿಗೆ ಏನಾದರೂ ಸಹಾಯ ಮಾಡಬೇಕು ಎನ್ನುವುದಾದರೆ. ಈ ಒಂದು ಕಾನೂನಿನಿಂದ ಸಾಧ್ಯವೇ ಹೊರತು, ಇಲ್ಲದೇ ಹೋದರೆ ಸಾಧ್ಯವಾಗುವುದಿಲ್ಲ. ಜೊತೆಗೆ ನಮ್ಮಲ್ಲಿ ಇನ್ನೊಂದು ಇದೆ, ಅದು ಏನೆಂದರೆ ತಮ್ಮ ಪಕ್ಷ ಅಧಿಕಾರಕ್ಕೆ ಬರಲಿಲ್ಲವೆಂದರೆ ಜನರಿಗೆ ಹೇಳಿ ಚಿತಾವಣೆ ಮಾಡುವುದು, ಇದು ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿದ ಹಾಗೆ ಆಗಿದೆ, ಅದು ನ್ಯಾಯವೋ, ಅನ್ಯಾಯವೋ ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದಕ್ಕೆ ಬ್ರಿಟೀಷರ ಕಾಲದಲ್ಲಿ, ಅಂದರೆ ಆಗ ಮಹಾತ್ಮಾ ಗಾಂಧೀಜಿಯವರು ಕರ ನಿರಾಕರ ಮಾಡಿದ ಉದ್ದೇಶವೇನಿತ್ತು, ಎಂದರೆ ಪರಕೀಯರನ್ನು ನಮ್ಮ ದೇಶದಿಂದ ಬಿಟ್ಟು ಓಡಿಸ ಬೇಕು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡಬೇಕು ಎನ್ನುತಕ್ಕ ಸುಂದರವಾದ ಉದ್ದೇಶದಿಂದ ಆ ಹೊತ್ತು ನಾವು ಆಂದೋಳನ ಮಾಡಿದ್ದೆವು. ಆದರೆ ಈ ಹೊತ್ತು ನಮ್ಮದೇ ಸರ್ಕಾರ, ಸರ್ಕಾರದಿಂದ ತೆಗೆದುಕೊಂಡ ಸಾಲವನ್ನು ವಾಪಸ್ಸು ಕೊಡದೇ ಹೋದರೆ ಪರಿಸ್ಥಿತಿ ಏನಾಗುತ್ತದೆ ? ಎನ್ನುವುದನ್ನು ಯೋಚನೆ ಮಾಡಬೇಕು. ಮೊನ್ನೇ ತಾನೇ ನಮಗೆ ಗೊತ್ತಿರುವ ಹಾಗೆ ರೈತರ ಚಳುವಳಿ ನಡೆಯಿತು. ಆಗ ಸಾಲವನ್ನು ಮರುಪಾವತಿ ಮಾಡ ಬೇಡಿ ಎಂದು ಹೇಳಿದರು, ಇದರ ಅರ್ಥ ನನಗೆ ಗೊತ್ತಾಗುವುದಿಲ್ಲ. ಈ ಹೊತ್ತು ಸಾಲವನ್ನು ಮರುಪಾವತಿ ಮಾಡದಿದ್ದರೆ ಪುನಃ ಸರ್ಕಾರ ಸಾಲ ಕೊಡುವುದಾದರೂ ಹೇಗೆ ? ಸರ್ಕಾರವನ್ನು ನಡೆಸುವುದಾದರೂ ಹೇಗೆ ? ತೆಗೆದುಕೊಂಡ ಹಣವನ್ನು ವಾಪಸ್ಸು ಕೊಡದಿದ್ದರೆ ಸರ್ಕಾರ ಏನಾದರೂ ಕಳ್ಳ ನೋಟುಗಳನ್ನು ಪ್ರಿಂಟ್ ಮಾಡಿಸಬೇಕೇ ? ಇದರಿಂದ ಆರ್ಥಿಕ ಪರಿಸ್ಥಿತಿ ಏನಾಗುತ್ತದೆ? ಸಾಲವನ್ನು ತೆಗೆದುಕೊಂಡವನು ವಾಪಸ್ಸು ಕೊಡಬೇಕು ಆಗ ಆರ್ಥಿಕ ಪರಿಸ್ಥಿತಿ ಕೂಡ ಸುವ್ಯವಸ್ಥಿತ ವಾದ ರೀತಿಯಲ್ಲಿ ಇರುತ್ತದೆ. ತೆಗೆದುಕೊಂಡ ಹಣವನ್ನು ವಾಪಸ್ಸು ಕೊಡುವುದಿಲ್ಲವೆಂದರೆ, ಸರ್ಕಾರ ಹೇಗೆ ನಡೆಯಬೇಕು, ಸಂಘಸಂಸ್ಥೆಗಳು ಹೇಗೆ ನಡೆಯಬೇಕು ? ಇವತ್ತು ಒಂದೊಂದು ಮುನಿಸಿಪಾಲಿಟಿ ಗಳಲ್ಲಿ ಮನೆ ಕಂದಾಯವನ್ನು ಕೊಡದೇ ಇರುವುದರಿಂದ ಲಕ್ಷಗಟ್ಟಲೆ ಬಾಕಿ ಉಳಿದಿದೆ ಇದನ್ನು ಯಾರೂ ಹೇಳುವವರು ಕೇಳುವವರು ಇಲ್ಲದ ಹಾಗಾಗಿದೆ. ಆದುದರಿಂದ ಅದನ್ನು ವಸೂಲಿ ಮಾಡುವುದಕ್ಕೆ ಈ ಶಕ್ತಿಯನ್ನು ಈ ಕಾನೂನು ಕೊಡುತ್ತದೆ, ಆ ದೃಷ್ಟಿಯಿಂದ ಈ ಕಾನೂನು ಅತ್ಯಾವಶ್ಯಕ ಆದ್ದಾಗಿ ನಾನು ಮಂತ್ರಿಗಳವರನ್ನು ಶ್ಲಾಘನೆ ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The question is :

"That the Karnataka Prevention of Incitement to Refuse or to Defer payment of Tax Bill, 1981, be taken into consideration."

The Motion was adopted

CLAUSE BY CLAUSE CONSIDERATION

CLAUSE 2 to 6

MR. DEPUTY SPEAKER.—The question is :

"That Clauses 2 to 6, both inclusive, do stand part of the Bill."

The Motion was adopted

Clauses 2 to 6, both inclusive, were added to the Bill.

CLAUSE 1, etc.

MR. DEPUTY SPEAKER.—The question is :

"That Clause 1, the Title, the Preamble and the Enacting Formula, do stand part of the Bill."

The Motion was adopted

Clauses 1, the Title, the Preamble and the Enacting Formula were added to the Bill.

MOTION TO PASS

SRI Y. RAMAKRISHNA.—Sir, I beg to move :

"That the Karnataka Prevention of Incitement of Refuse or to Defer Payment of Tax Bill, 1981 be passed."

MR. DEPUTY SPEAKER.—The question is :

"That the Karnataka Prevention of Incitement to Refuse or to Defer Payment of Tax Bill, 1981 be passed."

The Motion was adopted and the Bill was passed

THE KARNATAKA MOTOR VEHICLES TAXATION (AMENDMENT) BILL 1981

Motion to consider

SRI M. M. J. SAHYOJATHA (Minister for Transport and minor Irrigation) Sir, I beg to move.

"That the Karnataka Motor Vehicles Taxation (Amendment) Bill, 1981, be taken into consideration".

The question was proposed

ಶ್ರೀ ಎಂ. ಎಂ. ಜೆ. ಸಹ್ಯೋಜಾತ.—ಈ ಮಸೂದೆಯನ್ನು ತಂದಿರತಕ್ಕಂಥ ಉದ್ದೇಶವೇನೆಂದರೆ ನ್ಯಾಷನಲ್ ಪರ್ಮಿಟ್‌ನ್ನು ಏನು ದುರುಪಯೋಗ ಮಾಡುತ್ತಿದ್ದರು ಅದನ್ನು ತಪ್ಪಿಸುವುದಕ್ಕೋಸ್ಕರ